**ದಿಃ 19.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ಅಪ್ರಾಪ್ತ ವಾದಿಯ ಪಾಲನಾಕರ್ತನಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1 ವಾದಿಯ ಆಧಾರ ಕಾರ್ಡ

ನಿಪಿ-2 ನನ್ನ ಆಧಾರ ಕಾರ್ಡ

ನಿಪಿ-3 ನನ್ನ ಚುನಾವಣಾ ಗುರುತಿನ ಚೀಟಿ

ನಿಪಿ-4 ನನ್ನ ಪತ್ನಿಯ ಆಧಾರ ಕಾರ್ಡ

ನಿಪಿ-5 ಶಾಲಾ ದಾಖಲಾತಿ ಪ್ರಮಾಣ ಪತ್ರ

ನಿಪಿ-6 ವಾದಿಯ ಶಾಲಾ ದಾಖಲಾತಿ ಪ್ರಮಾಣ ಪತ್ರ

ನಿಪಿ-7 ವಾದಿಯ ವ್ಯಾಸಾಂಗ ಪ್ರಮಾಣ ಪತ್ರ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1ರಿಂದ 5 ಮಾನ್ಯ ಎಜಿಪಿ ರವರಿಂದಃ**

1) ನಾನು 2ನೇ ತರಗತಿ ವರೇಗೆ ಓದಿರುತ್ತೇನೆ. ನನಗೆ ಸಹಿ ವಾಡಲು ಮಾತ್ರ ಬರುತ್ತದೆ ಕನ್ನಾ ಓದಲು ಬರೇಯಲು ಬರುವುದಿಲ್ಲ. ನನ್ನ ಮುಖ್ಯೆ ವಿಚರಾರಣೇ ಪ್ರಾಬ್ವಣ ಪತ್ರದಲ್ಲಪಿ ಇರುವ ಪಳ್ಷಿಯಗಳು ನನಗೆ ತಿಳಿದಿವಿ. ಪ್ರಸ್ತೂತ ದಾವೆಯನ್ನು ನನ್ನ ಮಗನ ತಾಲಾ ದಾಖಲಾತಿಗಳಲ್ಲಿ ಆತನ ತಂದೆ ಆದ ನನ್ನ ಹೆಸರು ತಪ್ಪಾಗಿ ನಮೂದಾಗಿರುವ ಕುರಿತು

ಸಲ್ಲಿಸಿರುತ್ತೇನೆ. ವಾದಿಯನ್ನು ಶಾಲಾಗೆ ಸೇರಿಸುವಾಗ ನಾನು ಸರಿಯಾದ ಮಾಹಿತಿ ನೀಡಿ ದಾಖಲೆಗಳನ್ನು ಸಲ್ಲಿಸಿದರು ಸಹ, ಶಾಲೆಯವರು ತಪ್ಪಾಗಿ ನಮೂದಿಸಿಕೊಂಡಿರುತ್ತಾರೆ. ವಾದಿಯ ಶಾಲಾಗೆ ಪ್ರವೇಶ ನೀಡುವಾಗ ಪಾಲಕರಾದ ನಮ್ಮಿಂದ ಅವರು ಬರೆದುಕೊಂಡಿರುವ ಮಾಹಿತಿ ಸರಿಯಾಗಿದೆ ಎಂದು ತಿಳಿದುಕೂೀಂಡು ಸಹಿಪಿ ಪಡೆದು ನಂತರ ಪ್ರವೇಶ ನೀಡುತ್ತಾರೆ ಎಂದರೆ ಸರಿ ಆದರೆ ನನ್ನ ಹೆಸರನ್ನು ಮಾತ್ರ ತಪ್ಪಾಗಿ ನಮೂದಿಸಿಕೊಂಡಿರುತ್ತಾರೆ. ವಾದಿ ಈಗ ದ್ವಿತಿಯ ಪಿಯುಸಿಯಲ್ಲಿ ವ್ಯಾಸಾಂಗ ಮಾಡುತ್ತಿರುತ್ತಾನೆ. ಶಾಲಾ ದಾಖಲಾತಿಗಳಲ್ಲಿ ತಪ್ಪಾಗಿ ನಮೂದಾಗಿರುವ ಬಗ್ಗೆ ವಾದಿ ಪ್ರಥಮ ಪಿಯುಸಿ ಮುಗಿಸಿದ ನಂತರ ನಮ್ಮ ಗಮನಕ್ಕೆ ಬಂದಿರುತ್ತದೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕೊಟ್ಟ ಮಾಹಿತಿಯ ಮೇಲೆ ಪ್ರತಿವಾದಿಗಳು ವಾದಿಯ ವಿವರಗಳನ್ನು ನಮೂದು ಮಾಡಿಕೊಂಡಿದ್ದು, ಅವರು ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಹೆಸರು ಶಿವಾನಂದ ಎಂದು ತೋರಿಸಲು ದಾಖಲು ಹಾಜರು ಪಡಿಸಿರುತ್ತೇನೆ. ಪ್ರತಿವಾದಿಗಳ ತಪ್ಪಿಲ್ಲದಿದ್ದರೂ ಖೋಟ್ಟೆ ದಾಖಲೆಗಳನ್ನು ಸೃಷ್ಟಿಸಿಕೊಂಡು, ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.